ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾನು ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿದ್ದೇನೆ, 13 ಎಂದು ಹೇಳಿದ್ದಾರೆ. ಅವುಗಳನ್ನು ಭರ್ತಿಮಾಡಲಾಗಿದೆಯೆ ಎಂದು ಕೇಳಿದಾಗ ಭರ್ತಿ ಮಾಡಿದೆ ಎಂಬತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದಿಂದಲೆ ಶಿಫಾರಸ್ಸಾದಂಥ ಮತ್ತು ರಾಷ್ಟ್ರಪ್ರಶಸ್ತಿ ಪಡೆದಂಥ, ಬಡ್ತಿಯಲ್ಲೂ ಕೂಡ ಪದೋನ್ನತಿಯನ್ನು ಕೊಡದೆ ಹಾಗೆ ಉಳಿದಂತದ್ದು ಈ ಸರ್ಕಾರದ ಗಮನಕ್ಕೆ ಬಂದಿದೆಯೆ? ಏತಕ್ಕೋಸ್ಕರ ಆ ತರಹ ಆಗಿದೆ? ನರ್ಸಿಂಗ್ ಸ್ಟಾಫ್‌ಗೆ ಬಡ್ತಿಯನ್ನು ಕೊಡುವಾಗ ಏಕೆ ಹಿಂದಿನ ಆರೋಗ್ಯ ಇಲಾಖೆಯ ನಿರ್ದೇಶಕರು ಬರೆದಂಥ ಶಿಫಾರಸ್ಸುಗಳನ್ನು ಗಮನಿಸಿಲ್ಲ ಎನ್ನುವಂಥ ಪ್ರಶ್ನೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಅಜಯ್‌ಕುಮಾರ್ ಸರ್. ನಾಯಕ್ (ವೈದ್ಯಕೀಯ ಶಿಕ್ಷಣ ಮಂತ್ರಿಗಳ ಪರವಾಗಿ): ಸನ್ಮಾನ್ಯ ಅಧ್ಯಕ್ಷರೆ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ, ಉಪಾನ್ಯಾಸಕರನ್ನು ಭರ್ತಿಮಾಡಬೇಕಾದರೆ ಅಲ್ಲಿ ಈಗಾಗಲೇ ಓ.ಓ.ಡಿ.ಯಲ್ಲಿ ಐದು ಜನ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಭರ್ತಿ ಮಾಡಬೇಕಾದರೆ ನಿರ್ದಿಷ್ಟವಾದ ವಿದ್ಯಾರ್ಹತೆ ಇದ್ದವರು ಇಲ್ಲ. ಅದ್ದರಿಂದ ನೇಮಕಾತಿ ನಿಯಮದಲ್ಲಿ ತಿದ್ದುಪಡಿಯನ್ನು ಮಾಡಿಕೊಂಡು ಮಾಡಬೇಕಾಗುತ್ತದೆ. ಆ ಬಗ್ಗೆ ಶೀಘ್ರದಲ್ಲಿ ತಿದ್ದುಪಡಿಯನ್ನು ತಂದು ಅದನ್ನು ಭರ್ತಿಮಾಡುತ್ತೇವೆ.

ಶ್ರೀ ಆಯನೂರು ಮಂಜುನಾಥ್ : ಆದರೆ ತಮ್ಮ ಇಲಾಖೆಯೆ ಕೊಟ್ಟಂಥ ಕೆಲವು ಸುತ್ತೋಲೆಯ ಮಾರ್ಗಸೂಚಿಗಳಿವೆ ಅದರ ಉಲ್ಲಂಘನೆಯಾಗಿದೆ. ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ದಯಮಾಡಿ ಆಗಿರತಕ್ಕಂಥ ಅನ್ಯಾಯಗಳನ್ನು ತಾವು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್ : ಆಗಬಹುದು.

ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಖಾಲಿ ಇರುವ ಅಧ್ಯಾಪಕರುಗಳ ಹುದ್ದೆಗಳು.

2242 - ಶ್ರೀ ಎಸ್. ಅಂಗಾರ್ (ಸುಳ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಶಾಲೆಗಳಲ್ಲಿ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಒಟ್ಟು ಎಷ್ಟು ಜನ ಅಧ್ಯಾಪಕರುಗಳಿದ್ದಾರೆ?

ಈ ಶಾಲೆಗಳಲ್ಲಿ ಎಷ್ಟು ಅಧ್ಯಾಪಕರುಗಳು ಇರಬೇಕಾಗಿತ್ತು?

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಪ್ರಾಥಮಿಕ		ಪ್ರೌಢ		ಪದವಿಪೂರ್ವ	
ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ
131	08	14	02	04	03
404	30	91	18	31	22
489	43	154	19	39	23

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶೇ. 50 ರಷ್ಟು ಖಾಲಿ ಹುದ್ದೆಗಳನ್ನು ಅಕ್ಟೋಬರ್ 95ರೊಳಗೆ ತುಂಬಲು ಸರ್ಕಾರಿ ಆದೇಶದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರನ್ನು ತುಂಬುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಯು ಸರ್ಕಾರದ ಅಂತಿಮ ಪರಿಶೀಲನೆಯಲ್ಲಿದ್ದು ಈ ನಿಯಮಗಳು ಜಾರಿಗೆ ಬಂದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪಾನ್ಯಾಸಕರ ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗವು ಉಪನ್ಯಾಸಕರ ಆಯ್ಕೆಯ ಪ್ರಕ್ರಿಯೆ ಪ್ರಾರಂಭಿಸಿದೆ. ಆಯ್ಕೆಯ ಪಟ್ಟಿ ಸ್ವೀಕರಿಸಿದ ಕೂಡಲೇ ಹುದ್ದೆಗಳನ್ನು ತುಂಬಲಾಗುವುದು. ಖಾಸಗಿ ಪದವಿಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬುವುದು ಆಡಳಿತ ಮಂಡಳಿಯದ್ದೇ ಆಗಿರುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ (ಶ್ರೀ ಎಸ್. ಅಂಗಾರ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಪ್ರಾಥಮಿಕ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಜೂನಿಯರ್ ಕಾಲೇಜ್‌ಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತಹ ಸಂದರ್ಭದಲ್ಲಿ ಪಾರ್ಟ್ ಟೈಮ್ ಅಥವಾ ಸ್ಟಾಪ್ ಗ್ಯಾಪ್ ಲೆಕ್ಚರರ್‌ಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು ಪದವಿ ಪೂರ್ವ ಕಾಲೇಜ್‌ಗಳ ಹುದ್ದೆ ಭರ್ತಿಮಾಡುವ ಬಗ್ಗೆ ಮಾತ್ರ ಪ್ರಶ್ನೆ ಕೇಳಿದರು. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಿರುವ ಉತ್ತರವು ಪ್ರಾಯಶಃ ಅವರಿಗೆ ತೃಪ್ತಿಯುಂಟು ಮಾಡಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಲಿ 864 ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ತೀವ್ರವಾಗಿರತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಈ ರೀತಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳೆಲ್ಲವನ್ನೂ ತುಂಬಲು ಸರ್ಕಾರ ತೀವ್ರವಾದ ಆಸಕ್ತಿ ಹೊಂದಿದೆ, ಮತ್ತು ಅದನ್ನು ಜಾಗ್ರತೆಯಾಗಿ ಮಾಡುತ್ತದೆ.

ಹರಪ್ಪನಹಳ್ಳಿಯ 50 ಹಾಸಿಗೆ ಆಸ್ಪತ್ರೆ ಪ್ರಾರಂಭವಾಗಿರುವ ಬಗ್ಗೆ

2546 - ಶ್ರೀ ಡಿ. ನಾರಾಯಣದಾಸ್ (ಹರಪ್ಪನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪ್ಪನಹಳ್ಳಿಯ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಯಾವಾಗ ಪ್ರಾರಂಭವಾಯಿತು?

ಆ) ಈಗಿರುವ ಸಿಬ್ಬಂದಿ ಎಷ್ಟು?

ಇ) ಈಗಿರುವ ಸಿಬ್ಬಂದಿಗಳು ಬಹಳ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :